ಜಿಡಿ ಪ್ರತಿ ೩ ಪೈ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0

೧ ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.

ವಿ ಪಿ. ಪದ್ಧತಿ ಇಲ್ಲ.

ಪ್ರಕಟಣೆ ದರವನ್ನು ಬೇಕಾದವರಿಗೆ ತಿಳಿಸುತ್ತೆ.

Office—Chamaraja Agrahar, Mysore

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು

SATYAVADI

"ಸತ್ಯವಾದಿ" ವಾರಪತ್ರಿಕೆ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

Regd. No. M. 1299

"SATYAVADI"
OFFERS A
Profitable Medium
For Advertising

Space limited

Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೫ನೇ ಜೂನ್ ೧೯೨೫. [ಸಂಚಿಕೆ ೨೪

೧೦೦೦ ರೂಪಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ

ಸಾಲಾಮಿಸ್ರಿಮುರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿಸಂತಿದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆಸ್ಟಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು, ಅಜೀರ್ಣ, ಮಲಬದ್ದತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವುದು ಕಾಬೂಲ್ ಕಾಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವುವು. ಅನುಪಾನ ಪತ್ರಿಕೆಯು ಡಬ್ಬಿ ಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು.

ಕ್ರಯ ಡಬ್ಬಿ 1 ಕ್ಕೆ ರೂ. 2—0—0

ಟಪ್ಪಾಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8 ಆಣೆ. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ತಂತಿ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ.

ವಿಳಾಸ—ಡಿ ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೊ,
ಬೆಂಗಳೂರು ಸಿಟಿ

ಸೀಮೆ ಭಂಗಾಠದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಂಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷ್ಟ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಜ್ಜರ್‌ಲ್ಲಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಆವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬದಾಗಿ ಪ್ರಸಿದ್ರಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಬೇಕಾಗಿ ಪ್ರಾರ್ಥನೆ ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿ ಅತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ, ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ,

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು,

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT LOAN BONDS & Shares of Prominent Companies

BOUGHT & SOLD

For particulars apply to:—

THE SEMAH ELISHA COMPANY

MYSORE.

ಮೈಸೂರು ಸರ್ಕಾರಿ ಸಾಲದ ಪತ್ರ ಮತ್ತು ಕಂಪೆನಿ ಷೇರುಗಳನ್ನು ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಂಟಿಂಗ್ ಎಂಗ್ರೇಜ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮೊಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 15—12 ಸೈಜು ಎಂಗ್ರೇಜ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

"ಸತ್ಯವಾದಿ"

೫೧ನೆ ಜೂಲೈ ೧೯೨೫



ರತ್ನಸಿಂಹಾಸನಾರೂಢ-| ಶ್ರೀಕೃಷ್ಣಧರಣೀಪತೇ ||
ಭಗವತ್ಕೃಪಯಾವಾಹಿ | ಚಿರಂಕರ್ಣಾಟಮಂಡಲಂ ||

ಶ್ರೀಮನ್ಮಹಾರಾಜರವರ ೪೨ನೆಯ ವರ್ಷವರ್ಧಂತಿ

ನಮ್ಮ ಶ್ರೀಮನ್ಮಹಾರಾಜರವರ ೪೨ನೆಯ ವರ್ಷವರ್ಧಂತಿ ಮಹೋತ್ಸವವು ಇದೇ ಮಾಹೆ ೩೦ನೇ ಬುಧವಾರದ ದಿನ ಅತ್ಯಂತ ವಿಜೃಂಭಣೆಯಾಗಿ ನೆರವೇರಿತು.

ಪದ್ಧತಿಯ ಮೇರೆಗೆ ಅರಮನೆಯಲ್ಲಿ ನಡೆಯಬೇಕಾದ ದರ್ಬಾರ್ ವಗೈರೆ ಕಾರ್ಯಗಳು ಪ್ರಾತಃಕಾಲ ನೆರವೇರಲ್ಪಟ್ಟು ಮಧ್ಯಾಹ್ನಾತ್ಪರ 5 ಗಂಟೆಗೆ ಸರಿಯಾಗಿ ಅರಮನೆಯಿಂದ ಶ್ರೀಮನ್ಮಹಾರಾಜರವರು ಅಶ್ವಾರೂಢರಾಗಿ ಚತುರಂಗಬಲದೊಡನೆ, ಅನೇಕ ವಿಧವಾಗಿ ಅಲಂಕೃತವಾಗಿದ್ದ ಬೀದಿಯಲ್ಲಿ ಸವಾರಿಯು ರೆಸಿಡೆನ್ಸಿಗೆ ಜೆತ್ತೈಸುವಾಗ ಇಕ್ಕೆಲದಲ್ಲಿಯೂ ಕಿಕ್ಕಿರಿಯುವಂತೆ ನೆರೆದಿದ್ದ ಜನಸಂದಣಿಯನ್ನು ಪರಾಂಬರಿಸುತ್ತ ಪ್ರಜೆಗಳ ಅಭಿವಾದನಕ್ಕೆ ಪ್ರತ್ಯಭಿವಾದನವನ್ನು ಮಾಡುತ್ತ ಪುಷ್ಪಹಾರಗಳ ನಜರೆಯನ್ನು ಸ್ವಹಸ್ತದಿಂದ ಸ್ವೀಕರಿಸುತ್ತ ದಯಮಾಡುತಲಿದ್ದ ಪ್ರಭುವನ್ನು ನೋಡಿ ಪ್ರಜೆಗಳು ಧನ್ಯ ಧನ್ಯತೆಯನ್ನರ್ಪಿಸುತಿದ್ದರು.

ರಾತ್ರಿ ರೆಸಿಡೆನ್ಸಿಯಿಂದ ತಿರುಗಿ ಅರಮನೆಯನ್ನು ಪ್ರವೇಶಿಸುವಷ್ಟರಲ್ಲಿ ಸುಮಾರು 10 ಘಂಟೆಯಾಗಿತ್ತು. ರಾತ್ರಿಯ ಆ ಮೆರವಣಿಗೆಯನ್ನು ನೋಡಿದ ರಾರು ತಾನೇ ಸಂತೋಷದಿಂದ ಮೈಮರೆಯುವುದಿಲ್ಲ! ಸಂಪೂರ್ಣ ನಗರವೇ ಜ್ಯೋತಿರ್ಮಯವಾಗಿ ಆಕಾಶದ ನಕ್ಷತ್ರಗಳೆಲ್ಲವೂ ನಮ್ಮಾ ಮಾದರಿಯ ಪ್ರಭುವಿನ ಪಟ್ಟಣದ ಸೊಬಗನ್ನೂ ಪ್ರಭುವಿನ ಗಾಂಭೀರ್ಯತೆಯೊಡಗೊಂಡ ತೇಜಸ್ಸನ್ನೂ ಪ್ರಜೆಗಳ ರಾಜಭಕ್ತಿ ಪೂರ್ವಕವಾದ ಆನಂದಾಭಿವಾದನಗಳನ್ನೂ ನೋಡಲೆಸಿ ಭೂಮಿಗಿಳಿದು ಇಕ್ಕೆಲದಲ್ಲಿ ಸಾಲಾಗಿ ನಿಂತಿದ್ದಂತೆ ತೋರುವ ವಿದ್ಯುದ್ದೀಪಗಳ ಸಾಲು ತೊಳಗುತಿದ್ದಿತಲ್ಲದೆ ಅರಮನೆಯಂದರೆ ಶ್ರೀಮನ್ಮಹಾಪ್ರಭುವಿನ ದಿವ್ಯ ತೇಜೋರೂಪವೇ ಆಗಿ ತೋರುತಿದ್ದಿತು. ಮತ್ತಾರಿಗಿರುವುದೀ ವೈಭವ!

ನಮ್ಮ ಶ್ರೀಮಹಾಪ್ರಭುಗಳು ರಾಜಮಂಡಲಿಯಲ್ಲಿ ಅಗ್ರಗಣ್ಯರು. ಮತ್ತಾರಿಗೆ ಇಂತಹ ವೈಭವವೂ ತೇಜವೂ ಸಿಂಹಾಸನವೂ ಮೇಲಾಗಿ ಭಕ್ತಿಪೂರ್ಣರಾದ ಪ್ರಜೆಗಳೂ ಒಮ್ಮೆಗೇ ದೊರೆತಿರುತ್ತಿವೆ? ನಮ್ಮ ಮಹಾರಾಜರೆಂದರೆ ಕೇವಲ ಪುಣ್ಯಶಾಲಿಗಳು! ಮತ್ತಾವ ರಾಜನು ಪ್ರಜಾಪ್ರೀತಿಯನ್ನು ನಮ್ಮ ಪ್ರಭುವನಷ್ಟು ಸಂಪಾದಿಸಿರುವನು! ಪ್ರಜೆಗಳೂ ಭಾಗ್ಯವಂತರೇ! ಮತ್ತಾವದೇಶದ ಪ್ರಜೆಗಳಿಗೆ ಸರ್ವಸಮದರ್ಶಿಯೂ ನ್ಯಾಯಪರಾಯಣನೂ ಪ್ರಜಾವತ್ಸಲನೂ ಆದ ನಮ್ಮ ಪ್ರಭುವಿನಂತಹ ಪ್ರಭುವು ಸಿಕ್ಕಿರುತ್ತಾನೆ?

ಈ ಮಹೋತ್ಸವ ವೇಳೆಯಲ್ಲಿಯೇ ಪ್ರಜಾಪ್ರತಿನಿಧಿ ಸಭೆಯ ಕಾರ್ಯಗಳು ನಡೆಯುತ್ತವೆಯಾಗಿ ದೇಶದ ಸುಖಸಾಧನೆಯ ಸಲಹೆಗಳನ್ನು ಸ್ವೀಕರಿಸಿ ಸರ್ವರನ್ನೂ ಸಲಹುವುದು ಸ್ವಕರ್ತವ್ಯವೆಂಬುದನ್ನು ಸೂಚಿಸುವುದಕ್ಕಾಗಿಯೇ ವರ್ಧಂತಿ ಮಹೋತ್ಸವದೊಡನೆಯೇ ಕಲೆತಿದೆ.

ಇಂತಹ ಸರ್ವಗುಣಾಕರನೂ, ಸತ್ಯೋದ್ಧಾರಕನೂ, ಪ್ರಜಾಪಾಲಕನೂ ಆದ ನಮ್ಮ ಪ್ರಭುವು ಚಂದ್ರಸೂರ್ಯರಿರುವವರೆಗೂ ಹೀಗಿಯೇ ಅಭಿವೃದ್ಧಿಸುತ್ತಿರಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಿರುವೆವು.

ನಾಗರೀಕತೆಗಳ ಮಾತೃಭೂಮಿ

ಏಷ್ಯಾ ಖಂಡದ ಪ್ರಶಂಸೆ.

ನ್ಯೂಯಾರ್ಕಿನಲ್ಲಿ ಭಾರತ ಸಂಘ ಪ್ರಾರಂಭೋತ್ಸವ ಸಮಯದಲ್ಲಿ ಫೆಬ್ರವರಿ ೨೦ರಲ್ಲಿ ಡಾ|| ಜೆ. ಟಿ. ಸಂಡರ್ಲೆಂಡ್‌ರವರು ಈ ಕೆಳಿಗೆ ಕಂಡಂತೆ ಏಷ್ಯಾಖಂಡದ ನಾಗರಿಕತೆಯನ್ನು ಪ್ರಶಂಸಿಸುತ್ತ ಉಪನ್ಯಸಿಸಿದರು

" ಈ ಸಭೆಯನ್ನು ನೋಡಲು ನನಗೆ ಕೇವಲ ಸಂತೋಷಕರವಾಗಿದೆ. ನ್ಯೂಯಾರ್ಕಿನಲ್ಲಿಯೂ, ಇತರ ಸ್ಥಳಗಳಲ್ಲಿಯೂ, ಭಾರತ ಯುವಕರು ಸ್ಥಾಪಿಸಿದ ಸಂಘಗಳನೇಕವಿರುವುವು. ಆದರೆ ಅವು ಜಯಪ್ರದವಾಗಿರಲಿಲ್ಲ. ಅವು ಅಸಂಖ್ಯಾತವಾಗಿಯೂ ಇಲ್ಲ. ಜಾತೀಯ ಬಲವನ್ನು ಅಧಿಕ ಮಾಡಿಕೊಳ್ಳಲಿಲ್ಲ. ಈ ಸಂಘಗಳು ಮುಖ್ಯವಾಗಿ ಪ್ರಚಾರಕ ಸಂಘಗಳಾಗಿದ್ದುವು. ನಾನೊಬ್ಬ ಪ್ರಚಾರಕನು. ಭಾರತದೇಶಕ್ಕೆ ಸ್ವಾತಂತ್ರ್ಯವನ್ನು ಕೂಡಬೇಕೆಂದು ನನಗೆ ಸಂಪೂರ್ಣವಾದ ಸಾನುಭೂತಿ ಇದೆ ಈ ಉದ್ದೇಶವಿರುವುದೇ ಅಲ್ಲದೆ ಮಾಡಬೇಕಾದ ಕೆಲಸ ಅಧಿಕತರವಾದುದು. ಅದಕ್ಕಾಗಿಯೇ ಭಾರತ ಸಂಘವು ಸ್ಥಾಪಿಸಿರುವರು. ಏಷ್ಯಾ ಖಂಡವು ಬಹು ವಿಸ್ತಾರವಾದುದು ಭಾರತ ದೇಶವೊಂದು ದೊಡ್ಡ ದೇಶವು. ನಾವು ಪಾಶ್ಚಾತ್ಯರು. ಅದು ಎಷ್ಟು ದೊಡ್ಡದೋ ತಿಳಿಯೆವು. ಯೂರೋಪು ಚಿಕ್ಕ ಖಂಡವು. ಅಮೇರಿಕಾ ಅದಕ್ಕಿಂತಲೂ ಸಣ್ಣದು. ನಾವು ಹುಟ್ಟುವುದಕ್ಕೆ ಮುಂಚೆ ಎಷ್ಟೋ ಶತಾಬ್ದಿಗಳಿಂದಲೂ ಭರತ ಖಂಡವು ಪ್ರತಿಭವಿಸುಶ್ರಿತ್ತೆಂದು ನಮಗೆ ತಿಳಿಯಲಿಲ್ಲ.

"ಭಾರತ ಸಾಂಪ್ರದಾಯ ಪ್ರದರ್ಶನಗಳನ್ನು ಪಾಶ್ಚಾತ್ಯ ಪ್ರಪಂಚಕ್ಕೆಲ್ಲಾ ಎಲ್ಲ ಸಂಗತಿಗಳನ್ನೂ ತಿಳಿಸಲು ಇಂಥ ಸಂಘವು ಅವಶ್ಯವಾದುದು. ಅಂತಹ ಸ್ಥಳಗಳೂ ಸಹ ಕಾಣಿಸುತ್ತಲಿವೆ. ಈಗ ಹೋಗಿ ಬರಲು ವಿಶೇಷ ಸೌಕರ್ಯಗಳಿದ್ದರೂ ಪಾಶ್ಚಾತ್ಯದೇಶವು ಏಷ್ಯಾವನ್ನು ಕುರಿತು ದುರಭಿಪ್ರಾಯದಲ್ಲಿಯೇ ಮಗ್ನವಾಗಿರುವುದು. ಏಷ್ಯಾ ಖಂಡವು ಪ್ರಥಮದಲ್ಲಿ ಯೂರೋಪಿನಲ್ಲಿ ಕಾಲಿಟ್ಟಾಗಿನಿಂದ ದುರಭಿಪ್ರಾಯಗಳನ್ನುಂಟುಮಾಡಿತು. ಅದರಿಂದ ಯೂರೋಪಿಗೇನೂ ಲಾಭವಾಗಲಿಲ್ಲ. ಇಷ್ಟೇ ಅಲ್ಲದೆ ಯೂರೋಪೂ ಕೂಡ ಏಷ್ಯಾವಿಗೆ ಹೋಗುವುದಕ್ಕೆ ದುರುದ್ದೇಶದಿಂದಲೇ ಹೊರಟಿತು. ಚೀನಾ ದೇಶಸ್ಥರು ಕಾಲಹರಣಕ್ಕಾಗಿ ತುಪಾಕಿ ಮದ್ದನ್ನು ನಿರ್ಮಿಸಲು ಯೂರೋಪಿಯನರು ಅದನ್ನು ಮನುಷ್ಯ ಸಂಹರಣಕ್ಕಾಗಿ ಉಪಯೋಗಿಸಿದರೆಂಬ ವಾರ್ತೆಯೊಂದುಂಟು. ಇದರಲ್ಲಿ ಎಷ್ಟೋವಿರುವುದು.

ಭಾರತದೇಶದಲ್ಲಿ ಗಾಂಧಿಯು ಲೋಕೋತ್ತರ ಪುರುಷನಾಗಿರುವನು. ಆಧ್ಯಾತ್ಮಿಕ ಸತ್ಯದಲ್ಲಿ ಆತನನ್ನು ಹೋಲಿದವರು ಯಾರೂ ಇಲ್ಲ. ಭಾರತದೇಶದಲ್ಲಿ ಶಾಕೂರರವರೂ ಸಹ ಇರುವರು. ಕೆಲವು ವರ್ಷಗಳ ಹಿಂದೆ ಭಾರತೇಯನೊಬ್ಬ ಮಹಾಪುರುಷನು ಅದ್ಭುತ ವಾದ್ಯೀಯವನ್ನು ಪ್ರಸಿದ್ಧಪಡಿಸಿ, ಸೋಜೀ ಬಹುಮಾನವನ್ನು ಪಡೆದಾಗ ಯೂರೋಪು ಖಂಡವೆಲ್ಲವೂ ಆಶ್ಚರ್ಯದಿಂದ ಮಗ್ನವಾಗಿದ್ದಿತು. ಈ ಭಾರತ ಸಂಘವು ಅಮೇರಿಕವನ್ನೆಲ್ಲಾ ಭಾರತ ವಿಜ್ಞಾನವ್ಯವಹಾರಗಳಿಂದ ವ್ಯಾಪನೆ ಮಾಡಬಲ್ಲದೆಂದು ನಾನು ತಿಳಿದಿರುವೆನು.

ಏಷ್ಯಾಖಂಡವು ಪ್ರಪಂಚದಲ್ಲೆಲ್ಲಾ ವಿಜ್ಞಾನ ಸಾಂಪ್ರದಾಯಗಳ ಮೂಲಸ್ಥಾನವಾಗಿರುವುದು. ಈ ಸಂಘದಲ್ಲಿ ಪೂರ್ವ ಪಾಶ್ಚಾತ್ಯ ಎರಡರ ನಾಗರೀಕತೆಯನ್ನು ಏಕೀಕರಿಸಿ, ಪಾಶ್ಚಾತ್ಯದೇಶದ ಅದ್ಭುತ ನಾಗರೀಕತೆಯ ವಿಶೇಷಗಳು ಈ ದೇಶಕ್ಕೆ ತಿಳಿಯುವಂತೆ ಮಾಡಿದಲ್ಲಿ ಅತ್ಯಂತ ಲಾಭದಾಯಕವಾಗುವುದು.

ಅಮೇರಿಕಾದಲ್ಲಿ ಚೈನಾ, ಜಪಾನ್, ಸಂಘಗಳು ಇರುವಾಗ ಭಾರತಸಂಘವೇಕಿರಬಾರದು? ನಿಜಾಂಶವೇನೆಂದರೆ, ಪ್ರಪಂಚದ ಆ ಭಾಗದ ವಿಚಾರವಾಗಿ ಅಮೇರಿಕಾದವರಿಗೆ ಏನೂ ತಿಳಿಯದು. ಕಾರಣವೇನೆಂದರೆ, ಈ ದೇಶವು ಬಹಳ ಹೊಸದು. ಈಚೆನದು. ಇಷ್ಟೇ ಅಲ್ಲದೆ ಪ್ರಪಂಚದಲ್ಲೆಲ್ಲಾ ಪ್ರವಹಿಸಿದ ನಾಗರೀಕತೆಯ ಪ್ರವಾಹಗಳು ಏಷ್ಯಾಖಂಡದ ಮಧ್ಯ ಭಾಗದಲ್ಲುದ್ಭವಿಸಿ ಬಂದು ಪರ್ಷಿಯಾ, ಈಜಿಪ್ಟ್ ಇಂಡಿಯಾಗಳಲ್ಲುಳಿದು, ಮತ್ತೊಂದು ಪಾಶ್ಚಾತ್ಯ ದೇಶಗಳಲ್ಲಿ ಪ್ರವಹಿಸಿ, ಅಮೇರಿಕಾ ದೇಶವನ್ನು ತಲಪಿ ಕೆಲವು ಸಂವತ್ಸರಗಳು ಮಾತ್ರವಾದವು. ಈ ಎರಡನೆಯ ಪ್ರವಾಹವೊಂದನ್ನು ಅಮೇರಿಕಾದವರು ತಿಳಿದಿರುವರು, ಈ ಪ್ರವಾಹಗಳನ್ನು ಕುರಿತೇ ನಮ್ಮ ಚರಿತ್ರೆಕಾರರು ತಿಳಿಸಿರುವದು. ಏಷ್ಯಾವನ್ನು ಕೂಡ ಕುರಿತು ಸಾಮಾನ್ಯವಾಗಿ ತಿಳಿಸಿರುವನೇ ಏನಷ್ಟು ಪ್ರಾಮುಖ್ಯತೆಯಿಂದ ವಿವರಿಸಿಲ್ಲ. ಅಮೇರಿಕದಲ್ಲಿ ನಮಗೆ ಪಾಶ್ಚಾತ್ಯದ ಪ್ರವಾಹವು ಮೆಸಪಟೇಮಿಯಾ, ಪ್ಯಾಲಸ್ಟೈನ್ ನಿರಿನ ಗ್ರೀಸ್‌ನೊಳಕ್ಕೆ ಯೂರೊಪಿಗೂ ಪ್ರವೇಶಿಸಿರುವದನ್ನು ಕುರಿತೂ ತಿಳಿದಿರುವರು. ಏಷ್ಯಾಖಂಡವನ್ನು ಕುರಿತು ಹೊರಟ ತತ್ವಗದ ವಿಚಾರವಾಗಿ ಏನನ್ನೂ ತಿಳಿಸಿರುವದಿಲ್ಲ, ನಿಜಾಂಶವೇನೆಂದರೆ, ನಮಗೆ ತಿಳಿಸಿದುದಕ್ಕಿಂತಲೂ ಏಷ್ಯಾಖಂಡದದ್ದೇ ಉತ್ಕೃಷ್ಟವಾದುದು.

ಏಷ್ಯಾದಮೇಲೆ ಯೂರೋಪಿಗೆ ಧೂರ್ತತ್ವವಿರುವುದು. ಅಲಿಸಿದ ಜನರು ಮೃಗಗಳಂತೆಯೂ, ಪ್ರಪಂಚಸಾಗರ ಕಥೆಯಲ್ಲಿ ಹೆಸರು ಕುಲವಿಲ್ಲದವರೆಂದು ತಿಳಿಸಿರುವರು, ಆದರೆ ಏಷ್ಯಾವೆಂದರೆಂತಹುದು? ಜಗತ್ತಿಕ್ಕೆ ಏಷ್ಯಾ ಮಾತೃ ಭೂಮಿ. ಪ್ರಪಂಚಗಳೆಲ್ಲಾ ಮೂಲ. ಯೂರೋಪಿಗೆ

ನು ಏಷ್ಯಾದವನೇ ! ಮಕ್ಕಳಿಗೆ ತಾಯಿಯಲ್ಲಿ ಎಷ್ಟು ಗೌರವವಿರಬೇಕು. ಏಷ್ಯಾಖಂಡವೆಲ್ಲಾವುದಕ್ಕೂ ಮಾತೃಸಮಾನ. ಪ್ರಪಂಚ ಭಾಷೆಗಳಿಗೆಲ್ಲಾ ಮಾತೃ. ನಮ್ಮ ಅಮೇರಿಕಾದಲ್ಲಿರುವ ಭಾಷೆಯು ಏಷ್ಯಾವಿನಿಂದ ಬಂದದ್ದು. ಅಕ್ಷರಗಳಿಗೇ ಈ ದೇಶವು ಮೂಲವು ಪ್ರಪಂಚದಲ್ಲಿ ಮುಖ್ಯವಾದ ವಾಙ್ಮಯ ಕಲೆಗಳಿಗೆ ಮಾತೃ. ಗಣಿತ ಶಾಸ್ತ್ರಕ್ಕೆ ಮೂಲವು. ಅಂಕಿಗಳ ಪದ್ಧತಿ ಅಲ್ಲಿಯದು. ಇಲ್ಲದಿದ್ದರೆ ಗಣಿತವೇ ಇಲ್ಲದೆ ಹೋಗುವುದು. ಪ್ರಪಂಚದಲ್ಲೆಲ್ಲಾ ಆ ಖಂಡವೇ ನಾಗರಿಕತೆಗಳಿಗೆ ಮೂಲವು. ನಾಗರಿಕತೆಯು ಯೂರೋಪಿನಲ್ಲೆಲ್ಲಾ ಹರಡಲು ಪ್ರಾರಂಭಿಸಿದಾಗ ಯೂರೋಪು ಕ್ರೈಸ್ತ ಮತವನ್ನು, ಬೈಬಲನ್ನು ಗ್ರಹಿಸಿತು. ಮೊಸೆಸ್, ಸಾಲಮೆನ್, ಏಸಯ, ಏಸು, ಪಾಲ್ ಇವರೆಲ್ಲರೂ ಏಷ್ಯಾ ವಾಸಿಗಳೇ. ಯೂರೋಪನ್ನು ದೊಡ್ಡದು ಮಾಡುತ್ತ ನಾವು ಏಷ್ಯಾವನ್ನು ನಿರಾಕರಿಸುವೆವು.

ಇಲ್ಲಿ ನಾವು ಏಷ್ಯಾ ಖಂಡದಲ್ಲಿ ಎಲ್ಲದಕ್ಕಿಂತಲೂ ಭರತ ದೇಶದ ಮಾತನ್ನು ಹೆಚ್ಚಾಗಿ ಕೇಳುವೆವು. ಆ ದೇಶವು ಏಷ್ಯಾದಲ್ಲಿ, ಮಧ್ಯದಲ್ಲಿದೆ ಅಮೆರಿಕಾದಿಂದ ನಾವು ಜಪಾನಿಗೆ ಹೋಗಿ ಅಲ್ಲಿಂದ ಚೈನಾಕ್ಕೂ, ನಂತರ ಪರ್ಷಿಯಾಕ್ಕೂ ಅಲ್ಲಿಂದ ಇಂಡಿಯಾವಿಗೆ ಹೋಗುವೆವು. ದುರದೃಷ್ಟವಶಾತ್ ಭಾರತ ದೇಶವು ಮತ್ತೊಂದು ದೇಶಾಧಿಕಾರಕ್ಕೆ ಒಳಪಟ್ಟಿರುವುದು. ಆದ್ದರಿಂದಲೇ ಆ ದೇಶವು ಜಗಿಸಿದ ದೇಶದ ಪುರಾತ ವಿಜ್ಞಾನತರಂಡನನ್ನು ತೋರಿಸುವುದಿಲ್ಲ. ಈ ವಿಷಯಗಳೆಲ್ಲವನ್ನು ಮತ್ತೊಂದು ಮೂಲದಿಂದ ತಿಳಿಯಬೇಕು. ಭಾರತ ವೇಶ ವಿಜ್ಞಾನವನ್ನು ಮಿಷನರಿಗಳು ಪ್ರಚುರಪಡಿಸಿದರು. ಇವರು ಸ್ವತಂತ್ರ ಪುರುಷರು ಸ್ವಾರ್ಥವನ್ನು ಅಪೇಕ್ಷಿಸದೆ ತ್ಯಾಗಶೀಲರಾಗಿ ಇತರ ದೇಶಗಳಿಗೆ ಮತಪ್ರಚಾರಕ್ಕಾಗಿ ಕಳುಹಿಸಲ್ಪಟ್ಟ ಭಾರತೀಯರನ್ನು ಕ್ರೈಸ್ತ ಮತಕ್ಕೆ ಸೇರಿಸಲು ಬಂದವರು.

ಅಮೆರಿಕಾದ ಜನರು ಇವರಿಗೆ ಬಹಳ ಗೌರವವನ್ನು ಕೊಡುವರು. ಆ ಮಿಷನರಿಗಳು ಪುನ ಬಂದು, ಆ ದೇಶದಲ್ಲಿ ಗಾಂಧಿ, ಠಾಕೂರ್, ಇವರುಗಳನ್ನೂ ಕುರಿತೂ, ಸಾಹಿತ್ಯವನ್ನು ಕುರಿತೂ ಹೇಳಿದಲ್ಲಿ, ಅಲ್ಲಿನ ಜನರು ವಿಜ್ಞಾನ ಧನಿಕರಾಗಿರಲು ನಿಮ್ಮನ್ನು ಅಲ್ಲಿಗೆ ಕಳುಹಿಸಲು ಏತಕ್ಕೆ ಹಣವ್ಯಯ ಮಾಡಬೇಕು? ಎಂದರು. ಆದುದರಿಂದ ಅವರು ಹೇಳಬೇಕಾದ ವಿಷಯಗಳನ್ನು ಹೇಳರು. ಈ ವಿಷಯರಿಗಳ ಮೂಲಕ ಪಾತ್ರಿಗಳ ಮೂಲಕವೂ ದೇಶದ ವಾಙ್ಮಯ ಕರ್ತನಗಳ ಮೂಲಕವೂ ಅಮೇರಿಕದವರು ಭಾರತದೇಶವನ್ನು ಕುರಿತು ಕೇಳುತ್ತಿದ್ದರು.

ಇಂಥಾ ಭಾರತ ಸಂಘ ಒಂದು ಸ್ಥಾಪಿಸುವುದರ ಒಂದು ಅಡಿ ಮುಂದಕ್ಕೆ ಹೋಗುವುದು ಶ್ರಮವಾಗಿರುವುದು. ಅಮೆರಿಕಾದಲ್ಲಿಯೂ, ಪಾಶ್ಚಾತ್ಯ ಪ್ರಪಂಚದಲ್ಲಿಯೂ ಭಾರತ ವಿಜ್ಞಾನ ಸಂಪ್ರದಾಯವನ್ನು ಈ ಸಂಘವು ವ್ಯಾಪಿಸುವುದೆಂದು ಸಂಬಲವಾಗಿ ಈ ವಿಧವಾಗಿ ಭಾರತ ದೇಶದ ಕಡೆಗೆ ಸಾನುಭೂತಿಯನ್ನುಂಟು ಮಾಡಿ ಭಾರತ ದೇಶ ಸ್ವಾತಂತ್ರ್ಯವನ್ನು ಸುಧೀರ್ಘವನ್ನಾಗಿ ಮಾಡಲು ದೇವರು ಸಹಾಯವನ್ನು ಕೊಡಲಿ ''

ಪ್ರೊಫೆಸರ್ ದೇವಲ್ ಸರ್ಕಸ್

ಮೇಲ್ಕಂಡ ಕಂಪೆನಿಯವರು ಕೆಲ ದಿನಗಳಿಂದ ತಮ್ಮ ಅತ್ಯದ್ಭುತ ಪ್ರದರ್ಶನಗಳನ್ನು ಜೀವಣ್ಣರಾಯನ ಕಟ್ಟೆ ಬಳಿ ಇರುವ ತಮ್ಮ ಟೆಂಟಿನಲ್ಲಿ ಪ್ರದರ್ಶಿಸುತ್ತಿರುತ್ತಾರೆ. ಈ ಕಂಪೆನಿಯಲ್ಲಿರುವ ವಿದೂಷಕನ ಪಾರ್ಟನ್ನು ಮಾಡುವ ಬಂಡೋಪಂತ್ ದೇವಲ್‌ರವರ ಹಾಸ್ಯಗಾರಿಕೆಯನ್ನು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಅಪರ ಹಾಸ್ಯಗಾರಿಕೆ ನೋಡಿದವರು ನಗದೆ ಇರಲಾರರು. ಚಿಕ್ಕ ಚಿಕ್ಕ ಹುಡುಗರ ಭಯಂಕರವಾದ ಸಾಹಸ ಸರ್ಕಾರಗಳು ಬಲು ಮಟ್ಟಿಗೆ ಪ್ರೇಕ್ಷಕರಿಗೆ ಆನಂದವನ್ನುಂಟುಮಾಡುವುದು. ಶ್ರೀಮತಿ ಚಂಪಾವತಿಯ ತಂತೀ ಮೇಲೆ ಮಾಡುವ ಕಸರತ್ತುಗಳು ಶ್ಲಾಘ್ಯನೀಯವಾಗಿದೆ. ಕುದುರೆ, ನಾಯಿ, ಕೋತಿ ಮುಂತಾದ ಜೀವಜಂತುಗಳ ಆಟಗಳೂ ನೋಟಕರ ಮನಸ್ಸಿಗೆ ಆಹ್ಲಾದನೀಯವಾಗಿದೆ. ಕಂಪೆನಿಯವರು ಜನರ ಉಪಯೋಗಾರ್ಥವಾಗಿ ಮ್ಯಾಟಿನಿಗಳನ್ನು ಆಗಾಗ್ಗೆ ಆಡತಕ್ಕವರಾಗಿರುತ್ತಾರೆ, ಮೈಸೂರು ಪ್ರಜೆಗಳು ಇವರ ಆಟವನ್ನು ನೋಡಿ ಪ್ರೋತ್ಸಾಹಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.

ವೃತ್ತಾಂತ ಸಂಗ್ರಹ

ಲಂಡನ್ನಿನಲ್ಲಿ ನಡೆಯುತ್ತಿದ್ದ ಒಂದು ನರ್ತನದಲ್ಲಿ ಭಾಗಿಯಾಗಿದ್ದ ಒಬ್ಬ ೧೯ ವರ್ಷವಯಸ್ಸಿನ ಹುಡುಗನು ಅಕಸ್ಮಾತ್ತಾಗಿ ಕುರುಡನಾಗಿ ಹೋದನೆಂದೂ ಕೂಡಲೇ ಲಂಡನ್ ಆಸ್ಪತ್ರೆಗೆ ಕಳುಹಿಸಲ್ಪಟ್ಟಿರುವನೆಂದೂ ಆಸ್ಪತ್ರೆ ಅಧಿಕಾರಿಗಳಿಗೆ ಇನ್ನೂ ಗೋಚರವಾಗಿಲ್ಲವೆಂದೂ. ಆದರೂ ಅವರು ಪುನಃ ಕಣ್ಣು ಕಾಣುವಂತೆ ಮಾಡಲುತುಂಬಾ ಪ್ರಯತ್ನ ಪಡುತ್ತಿರುವರೆಂಬದಾಗಿಯೂ ಲಂಡನ್ನಿಂದ ಬಂದಿರತಕ್ಕ ವರ್ತಮಾನಗಳಿಂದ ತಿಳಿಯಬಂದಿದೆ.

ಈಚೆಗೆ ಬೆಜವಾಡ ಮುಂತಾದ ಆಂಧ್ರ ದೇಶದ ಪ್ರದೇಶಗಳಲ್ಲಿ ಸೈಕ್ಲೋನಿನಿಂದ ಎಂ. ಎಸ್. ಎಂ. ರೈಲ್ವೆ ಕಂಪೆನಿಯವರಿಗೆ ೨ ಲಕ್ಷಕ್ಕೆ ಮೇಲ್ಪಟ್ಟು ನಷ್ಟ ಉಂಟಾಗಿರುವಂತೆ ತಿಳಿಯಬಂದಿದೆ.

—ಮದ್ರಾಸಿನಲ್ಲಿ ಒಬ್ಬ ೫೦ ವರ್ಷ ವಯಸ್ಸಿನವನು ತನ್ನ ಜೀವವಾನದ ಅಸಾಧ್ಯ ಕಷ್ಟದಿಂದ ಮತ್ತು ತನಗೆ ಹಿಂಸೆ ಕೊಡುತ್ತಿದ್ದ ಉಬ್ಬಸ ರೋಗದಿಂದ ಪಾರಾಗಲು ಒಂದು ಚಾಕು ತೆಗೆದುಕೊಂಡು ಕತ್ತನ್ನು ಕುಯ್ದು ಕೊಂಡನು. ತುಂಬಾ ರಕ್ತ ಸುರಿಯುತ್ತಿದನ್ನು ಆತನ ಹೆಂಡತಿ ಬಂದು ನೋಡಿ ತುಂಬಾ ರೋಧನ ಮಾಡಲುಪಕ್ರಮಿಸಿದಳು. ನೆರೆ ಹೊರೆಯವರೆಲ್ಲಾ ಒಂದರು. ಆತನನ್ನು ಆಸ್ಪತ್ರೆಗೆ ಸಾಗಿಸಿದರು ದಿನೇ ದಿನೇ ಗುಣವಾಗುತ್ತಿರುವನೆಂದೂ ವರ್ತಮಾನ ಬಂದಿದೆ.

—ಮೈ|| ಸರ್ ಆಷ್ಟೋಷ್ ಮೂಕರ್ಜಿಯವರು ತಮ್ಮಲ್ಲಿದ್ದ ಸುಮಾರು ೪೦ ಸಾವಿರ ರೂಪಾಯಿಗಳು ಬೆಲೆ ಬಾಳುವ ೩೦೦೦ ಪುಸ್ತಕಗಳನ್ನು ಕಾಶೀ ವಿಶ್ವವಿದ್ಯಾಲಯಕ್ಕೆ ಉದಾರವಾಗಿ ದಾನಮಾಡಿರುತ್ತಾರೆ.

—ಯುನೈಟೆಡ್ ಸ್ಟೇಟಿನಲ್ಲಿ ಮೋಟಾರುಗಾಡಿಗಳ ಪ್ರಯಾದದಿಂದ ೧೯೦೦೦ ಜನರು ಸತ್ತುಹೋದರಲ್ಲದೆ ೪೫೦೦೦೦ ಜನರಿಗೆ ಗಾಯವಾಗಿರುತ್ತದೆ.

—ಕಲ್ಕತ್ತ ಮಾರವಾಡಿಗಳ ಚೇಂಬರ್ ಆಫ್ ಕಾಮರ್ಸಿನ ಈಚಿನ ವಿಾಟಿಂಗಿನಲ್ಲಿ ಇಂಡಿಯಾದಲ್ಲಿ ಪರದೇಶಿ ಬಟ್ಟೆ ವ್ಯಾಪಾರ ಬಹು ಹೀನ ಸ್ಥಿತಿಗೆ ಬಂದಿರುವುದೆಂದೂ ಕೋಟ್ಯಾಂತರ ರೂಪಾಯಿನ ಬಟ್ಟೆಗಳು ಗಡಂಗುಗಳಲ್ಲಿ ಖರ್ಚಿಲ್ಲದೆ ಬಿದ್ದಿರುವುದೆಂದೂ ತಿಳಿಸಿ ಇನ್ನೂ ನಾಲ್ಕು ತಿಂಗಳು ಹೊರದೇಶದಿಂದ ಯಾವ ಬಟ್ಟೆಯನ್ನೂ ತರಿಸಕೂಡದೆಂದೂ ತೀರ್ಮಾನಿಸಿರುವರು.

—ಎಡ್ವಿಕ್ ಫಿಲಾಟ್ ಎಂಬಾತನನ್ನು ತನಗೆ ಉತ್ತಮ ಗ್ರಂಥಗಳನ್ನು ಬರೆಯಲು ಯಾವ ಹೊತ್ತು ಅತಿ ಶ್ರೇಷ್ಠವಾದುದೆಂದು ಕೇಳಲು, '' ನೀನು ಆಡುದಕ್ಕೆ ಯಾವಾಗ ಜನರಿಂದ ಹೆಚ್ಚಾಗಿ ಪ್ರಧಫಲ ದೊರೆಯುವುದೋ ಅದೇ '' ಎಂದನು.

—ಕರಾಚಿಯ ಇಬ್ಬರು ಟೆಲಿಗ್ರಾಫ್ ಡಿಪಾರ್ಟ್‌ಮೆಂಟಿನ ಗುಮಾಸ್ತರು ಟೆಲಿಗ್ರಾಫ್ ಚಾರ್ಜಿನ ' ಲೇಟ್ ' ಫೀಜನ್ನು ಲೆಕ್ಕಕ್ಕೆ ತಾರದೆ ದುರಸ್ತು ಮಾಡಿದ್ದಕ್ಕಾಗಿ ಅವರಮೇಲೆ ಆಪಾದನೆ ಬಂದು ವಿಚಾರಣೆ ಪ್ರಾರಂಭವಾಗಿದೆ.

—ನಮ್ಮ ದಿವಾನರಾದ ಮಿ|| ಬಾನರ್ಜಿ ಯವರಿಗೆ '' ನೈಟ್‌ಹುಡ್ '' ಪದವಿಯೂ ಸಂಸ್ಥಾನದ ಫೈನಾನ್ಷಿಯಲ್ ಸೆಕ್ರೆಟರಿ ಎಂ. ಎ. ಕೃಷ್ಣರಾಯರಿಗೆ '' ರಾವ್ ಬಹದ್ದೂರ್ '' ಎಂಬ ಬಿರುದೂ ದೊರೆತಿರುವುದು.

—ತಿರುವಾಂಕೂರಿನಲ್ಲಿ ಯಾವ ದೇವಾಲಯದ ಮುಂದೆಯೂ ಜೀವಜಂತುಗಳ ಬಲಿಯನ್ನು ಕೊಡಲಾಗದೆಂದು ಅಲ್ಲಿಯ ಸರ್ಕಾರದ ಆಜ್ಞೆ.

—ಮೈಸೂರು ಸಂಸ್ಥಾನದ ರಾಜಕೀಯ ಸಮ್ಮೇಳನವನ್ನು ಆಗಸ್ಟ ತಿಂಗಳಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಸಬೇಕೆಂದು ಬೆಂಗಳೂರಿನ ಸ್ವರಾಜ್ಯ ಪಾರ್ಟಿಯವರು ಏರ್ಪಡಿಸುತ್ತಿರುವರು.

—ಶಿವಗಿರಿಯ ಎಲೇಜ್ ಮುಸೀಫ್ ಪಲಾಗಿಕು ಮಾರಶಿನ್ನಯ್ಯಗೌಡ್ ಎಂಬಾತನನ್ನು ಅಲ್ಲಿಯ ಜನರು ಖೂನಿಮಾಡಿರುತ್ತಾರೆ. ಇವನಿಗೆ ಹೆಂಡಿರು ಮಕ್ಕಳಾರೂ ಇರುವುದಿಲ್ಲ. ಆಸ್ತಿ ಮಾತ್ರ ಮೂರು ಲಕ್ಷಕ್ಕೆ ಮೇಲ್ಪಟ್ಟಿದೆಯಂತೆ.

—ಇಂದೂರಿನಲ್ಲಿ ಬಯಾಸ್ಕೋಪಿನವರು ' ಷಹಜಹಾನಿನ ' ಸಂಬಂಧವಾದ ಚಿತ್ರ ತೋರಿಸಲು ಸರ್ಕಾರದಿಂದ ನಿಷೇಧಿಸಲ್ಪಟ್ಟಿದೆ. ಕಾರಣವೇನೆಂದರೆ ಷಹಜಹಾನಿನ ಪತ್ನಿಯ ಹೆಸರು ಮುಂತಾಜ್. ಆ ಮಹಾರಾಜರಿಗೆ ಈಗ ಆ ಹೆಸರೇ ಆಗದಂತೆ.

—ತಿರುವಾಂಬಲ್ಲಿನ ನಾಯಕ ಸಮಾಜದವರು ತಮ್ಮ ಜಾತೀಯ ಮನೆಯಲ್ಲಿ ಖಡ್ಡಾಯವಾಗಿ ನೂಲಲೇಬೇಕೆಂದೂ ಬೋರ್ಡು ಪಾಠಶಾಲೆಗಳಲ್ಲಿ ನೂಲುವುದನ್ನು ಕಲಿಸಬೇಕೆಂದೂ ಠರಾವುನುಮಾಡಿರುತ್ತಾರೆ.

—ಚೈನಾದಲ್ಲಿ ದರೋಡೆಗಾರರ ಗುಂಪು ಹೊರಟು ಪ್ರಜೆಗಳನ್ನು ಹಿಂಸಿಸಿ ಸಿಕ್ಕಿದುದನ್ನು ದೋಚಿಕೊಂಡು ಹೋಗುತ್ತಿರುವರು. ಈ ಲೂಟಿಗಾರರ ಹಾವಳಿ ಕೇಳಿ ಕೆಲವರು ಒಂದು ಗುಹೆಯಲ್ಲಿ ಔತುಕೊಂಡರು ಈ ತುಂಟರಿಗೆ ಆ ವರ್ತಮಾನ ತಿಳಿದು ಗುಹೆಬಾಗಿಲಲ್ಲಿ ಹುಲ್ಲು ಸಾದೆ ಹಾಕಿ ಬೆಂಕಿಹತ್ತಿಸಲು ಒಳಗಿನವರಿಗೆ ಉಸಿರಾಡಲು ಅವಕಾಶವಿಲ್ಲದೆ ಈಚೆಗೆ ಬರಲು ಪಕ್ರಮಿಸಿದರು. ಹಾಗೆ ಈಚೆಗೆ ಬಂದವರನ್ನು ಕಲ್ಲಿನಿಂದ ಹೊಡೆದು ಸಾಯಿಸಲು ಈ ಕ್ರೂರಾತ್ಮಿಗಳು ಪ್ರಾರಂಭಿಸಿದರು.

ಕೆಲವು ದಿನಗಳು ಮಾತ್ರ

ಈ ರಾತ್ರಿ ೧೦ ಘಂಟೆಗೆ ಈ ರಾತ್ರಿ

ಪ್ರೋ. ದೇವಲ್ ಸರ್ಕಸ್

ಜೀವಣರಾಯನ ಕಟ್ಟೆ ಬಳಿ, ಮೈಸೂರು

ನಾಳೆ ಶನಿವಾರ ೬—೬—೨೫ ಮತ್ತು ಭಾನುವಾರ ೭—೬—೨೫ ಮ್ಯಾಟಿನಿ ಸಾಯಂಕಾಲ ೫ ಘಂಟೆಗೆ

ಮ್ಯಾಟಿನಿಗಳಿಗೆ ಮಾತ್ರ ಹುಡುಗರಿಗೆ ಅರ್ಧ ಛಾರ್ಜು

ಅತ್ಯದ್ಭುತ, ಸಾಹಸಿಕ, ವಿನೋದರಂಜಕ ಆಟಗಳು

ವಿ. ಎಸ್ ದೇವಲ್ 5-6

ಕೆ.ಎಸ್. ದೇವಲ್ ಆರ್. ಏ ಪಟ್ಟವರ್ಧನ್

ಪ್ರೊಪ್ರೈಟರ್ಸ್ ಮ್ಯಾನೇಜರ್

The Champion Metropolitan College of Commerce, Economics, Banking, etc.

YELWAL ROAD, MYSORE.

1925--26 Prospectus can be had free at the College or by post on receipt of ½ anna stamp to cover postage (5-6)

TO LET

to

Permanent Advertisers

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಂಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಷರಬತ್ತುಗಳು, ಇವುಗಳೆಲ್ಲಾ ಪೊರೆಯುತ್ತವೆ. ಖರೀದಿ ಸಡವೆಯಾಗಿಯೂ, ಪದಾರ್ಥಗಳು ನಂಬಿಕೆಯಾಗಿಯೂ ಇರುತ್ತವೆ. ಅಪೇಕ್ಷಿಸುವವರು ತರಿಸಿಕ್ಕೊಳ್ಳ ಬೇಕಾಗಿ ಪ್ರಾರ್ಥನೆ. [22-6]

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿಗಳು, ಮೈಸೂರು

To Popularise your Business in the Karnataka Provinces

YOU MUST ADVERTISE IN the "SATYAVADI"

BECAUSE

It is the cheapest and most up-to-date Karnatic Weekly

It is read largely and widely

Itis circulated among all grades of persons

It offers a profitable medium for advertising

Advertisement in this Paper is a good investment

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column measures about 13"×2½". 3columns to a page. Voucher copy supplied free.

All communications & remittances to be addressed to

The Manager,
SATYAVADI Office,
Mysore, S. India.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-6

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್ ಮಾಡಿರತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ
927 ಚಾಮರಾಜ ಪುರಂ, ಮೈಸೂರು

ಕಾದಂಬರೀ ಸಂಗ್ರಹ

ಮನೋಹರವಾದ ಕರ್ಣಾಟಕ ಮಾಸಪತ್ರಿಕೆ

ಚಾಮರಾಜ ನಗರ

THE

MYSORE PRESS

RAMAVILAS ROAD

MYSORE

We undertake to print

JOBS — BOOKS & PERIODICALS

Neat Workmanship

Moderate Charges

Prompt Execution

Colour & artistic work a speciality

Trial order solicited

B. S. MURTHY, B. A
Proprietor.

ವೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ

ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

☞ ದಯವಿಟ್ಟು ಗಮನಿಸಿ:—

ನಮ್ಮ ಮುದ್ರಣವು ಬಹು ಅಂದ!

ನಮ್ಮ ಅಕ್ಷರವು ಬಲು ಚಂದ!!

ನಮ್ಮ ಕೆಲಸ ನೋಡುವವರಿಗೆ

ನೇತ್ರಾನಂದ!!!

ಬಿ. ಎಸ್. ಮೂರ್ತಿ, ಬಿ. ಎ
ಪ್ರೊಪ್ರೈಟರ್.

Printed and Published by B.S.Murthy at the Mysore Press, Mysore and Proprietor.